*(ಇಂದು ದಿನಾಂಕಃ **08/01/2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)*

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಎಚ್.ಜಿ.ಎಚ್. (ಎಸ್.ಆರ್.ಎಚ್.) ವಕೀಲರಿಂದಃ-**

6. ಎದುರುದಾರರು ಹಾಜರುಮಾಡಿದ ದಾಖಲೆಗಳ ಪಟ್ಟಿಯನ್ನು ನಿಆರ್-1, ವಿಚಾರಣೆಯ ಆರ್ಡರ ಶೀಟನ್ನು ನಿಆರ್-2, ಆಪಾದನಾ ಪತ್ರವನ್ನು ನಿಆರ್-3, ಅರ್ಜಿದಾರರ ಮನವಿಯನ್ನು ನಿಆರ್-4, ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿ ನೇಮಕ ಆದೇಶವನ್ನು ನಿಆರ್-5, ಐದು ತಿಳುವಳಿಕೆ ಪತ್ರಗಳನ್ನು ನಿಆರ್-6, ಪ್ರಾಥಮಿಕ ವಿಚಾರಣೆಯ ವಿವರಗಳನ್ನು ನಿಆರ್-7, ವಿಚಾರಣಾ ನಡುವಳಿಕೆಯನ್ನು ನಿಆರ್-8, (ಉಡುಪಿ ಮಹಿಳಾ ಪೊಲೀಸ ಠಾಣೆಯ ಅಪರಾಧ ಸಂಖ್ಯೆ 22/2017 ಕಲಂ.363 ರಲ್ಲಿ ನೀಡಲಾದ ನೊಂದ ಬಾಲಕಿಯ ಹೇಳಿಕೆ ಪ್ರತಿಯನ್ನು ಗುರುತಿಸಲು ಎದುರುದಾರರ ವಕೀಲರು ಮಾಡಿಕೊಂಡ ಮನವಿಯನ್ನು ತಳ್ಳಿಹಾಕಿ ಸದರಿ ದಾಖಲೆಯನ್ನು ಈ ಸಂದರ್ಭದಲ್ಲಿ ಈ ಸಾಕ್ಷಿಯ ಮೂಲಕ ಗುರುತಿಸಲು ಬರುವುದಿಲ್ಲ ಎಂದು ಆದೇಶಿಸಲಾಯಿತು.), ಪೊಲೀಸರು ಎದುರುದಾರರಿಗೆ ಬರೆದ ಪತ್ರದ ಪ್ರತಿಯನ್ನು ನಿಆರ್-9, ವಿಭಾಗೀಯ ಭದ್ರತಾ ನಿರೀಕ್ಷಕರ ಪತ್ರಗಳ ಪ್ರತಿಗಳನ್ನು ನಿಆರ್-10 ರಿಂದ 12, ಉಡುಪಿ ವೃತ್ತದ ಪೊಲೀಸ ನಿರೀಕ್ಷಕರ ಪತ್ರದ ಪ್ರತಿಯನ್ನು ನಿಆರ್-13, ನನ್ನ ವರದಿಯ ಪ್ರತಿಯನ್ನು ನಿಆರ್-14, ಕಾರಣ ಕೇಳುವ ನೋಟೀಸಿನ ಪ್ರತಿಯನ್ನು ನಿಆರ್-15, ತಿಳುವಳಿಕೆ ಪತ್ರವನ್ನು ನಿಆರ್-16, ತಿಳುವಳಿಕೆ ಪತ್ರಕ್ಕೆ ಉತ್ತರವನ್ನು ನಿಆರ್-17, ನೋಟೀಸಿಗೆ ಉತ್ತರವನ್ನು ನಿಆರ್-18, ಮುಂದುವರೆದ ಕಾರಣ ಕೇಳುವ ನೋಟೀಸನ್ನು ನಿಆರ್-19, ಶಿಸ್ತು ಪ್ರಾಧಿಕಾರದ ಆದೇಶವನ್ನು ನಿಆರ್-20, ಒಂದು ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-21, 5 ತಿಳುವಳಿಕೆ ಪತ್ರಗಳನ್ನು ನಿಆರ್-22, ಒಂದು ಸೂಚನಾ ಪತ್ರವನ್ನು ನಿಆರ್-23 ಮತ್ತು ಸೀರಿಯಲ್ ಅರ್ಜಿಯ ಒಂದು ಆದೇಶವನ್ನು ನಿಆರ್-24 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್.ವಿ.ಪಿ. (ಐ.ವಿ.ಪಿ.) ವಕೀಲರಿಂದಃ-**

7. ನೇಮಕಾತಿ ಪ್ರಾಧಿಕಾರ ವಿಚಾರಣಾಧಿಕಾರಿಯನ್ನು ನೇಮಕ ಮಾಡಬೇಕಾಗುತ್ತದೆ ಎನ್ನುವುದು ನಿಜ. ನನ್ನನ್ನು ನೇಮಕಾತಿ ಪ್ರಾಧಿಕಾರ ನೇಮಕ ಮಾಡಿಲ್ಲ ಎನ್ನುವುದು ಸುಳ್ಳು. ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡುವಾಗ ಹೆಸರು ನಮೂದು ಮಾಡಬೇಕಾಗುತ್ತದೆ ಎನ್ನುವುದು ನಿಜ. ಮಂಡನಾಧಿಕಾರಿಯ ಹೆಸರು ನಮೂದು ಮಾಡಿ ಆದೇಶ ಹೊರಡಿಸಿಲ್ಲ ಎನ್ನುವುದು ನಿಜ. ವಿಚಾರಣಾಧಿಕಾರಿ ಆಪಾದನೆ ಪತ್ರ ತಯಾರಿಸಿ ಓದಿ ವಿವರಿಸಿ ನೌಕರನಿಗೆ ಹೇಳಬೇಕಾಗುತ್ತದೆ ಎಂದರೆ ಆಪಾದನೆಯನ್ನು ನೇಮಕಾತಿ ಪ್ರಾಧಿಕಾರ ತಯಾರಿಸಿರುತ್ತದೆ. ನಾನು ದೋಷಾರೋಪಣೆಗಳನ್ನು ರಚಿಸಿಲ್ಲ ಎನ್ನುವುದು ನಿಜ.

8. ಅರ್ಜಿದಾರ ತನ್ನ ಸಹೋದ್ಯೋಗಿಯನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದ ಎನ್ನುವುದು ನಿಜ. ಅರ್ಜಿದಾರ ಸಹೋದ್ಯೋಗಿಯನ್ನು ನೇಮಕ ಮಾಡಿಕೊಂಡಾಗ ಸದರಿ

ಸಹೋದ್ಯೋಗಿ ಹಾಗೂ ಮೇಲಾಧಿಕಾರಿಗೆ ವಿಚಾರಣಾಧಿಕಾರಿ ತಿಳಿಸಬೇಕಾಗುತ್ತದೆ ಎನ್ನುವುದು ಸುಳ್ಳು. ಸಹೋದ್ಯೋಗಿಯನ್ನು ಸಹೋದ್ಯೋಗಿಯ ಮೇಲಾಧಿಕಾರಿ ಪರವಾನಿಗೆ ನೀಡಿದಾಗ ಮಾತ್ರ ವಿಚಾರಣೆಯ ಕಾಲಕ್ಕೆ ಹಾಜರಾಗಬಹುದು ಎಂದರೆ ಅದು ಆಪಾದಿತ ಮತ್ತು ಸಹೋದ್ಯೋಗಿಗೆ ಬಿಟ್ಟದ್ದು. ಆಪಾದಿತ ತನ್ನ ಸಹೋದ್ಯೋಗಿಯನ್ನು ನೇಮಕ ಮಾಡಿಕೊಳ್ಳುವ ಕುರಿತು ವಿಚಾರಣೆ ವರದಿ ಹಾಗೂ ಆರ್ಡರ ಶೀಟನಲ್ಲಿ ನಮೂದು ಮಾಡಿಲ್ಲ ಎನ್ನುವುದು ಸುಳ್ಳು. ವಿಚಾರಣೆ ಕಾಲಕ್ಕೆ ಹಾಜರಿದ್ದ ಮಂಡನಾಧಿಕಾರಿ, ಆಪಾದಿತ ಮತ್ತು ಇತರರ ಕುರಿತು ನಮೂದು ಮಾಡಬೇಕಾಗುತ್ತದೆ ಎನ್ನುವುದು ನಿಜ. ದಿನಾಂಕ:25/02/2020 ರಂದು ಆಪಾದಿತ ಹಾಜರಿರಲಿಲ್ಲ ಎನ್ನುವುದು ಸುಳ್ಳು. ವರದಿಗಾರ ಹಾಜರಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ನಮೂದು ಮಾಡಿಲ್ಲ ಎನ್ನುವುದು ನಿಜ.

9. ವರದಿಗಾರ ಸಾಕ್ಷಿ ಹಾಜರಿಲಿಲ್ಲದಿದ್ದಾಗ್ಯೂ ಆಪಾದಿತ ಪಾಟೀ ಸವಾಲು ಮಾಡಿಲ್ಲ ಎಂದು ಮಾಡಿರುವ ಆದೇಶ ಸರಿಯಲ್ಲ ಎನ್ನುವುದು ಸರಿಯಲ್ಲ. ಆಪಾದಿತನು ಕೋವಿಡ್-19 ರ ಅವಧಿಯಲ್ಲಿ ಗೈರು ಹಾಜರಿದ್ದ ಎನ್ನುವುದು ನೆನಪಿಲ್ಲ. ನಿಆರ್-2 ನನ್ನ ಕೈಬರಹದಲ್ಲಿ ಇಲ್ಲ ಎನ್ನುವುದು ಸುಳ್ಳು. ದಿನಾಂಕ:30/06/2020 ರ ಆರ್ಡರ ಶೀಟನಲ್ಲಿ ನನ್ನ ಸಹಿ ಇಲ್ಲ ಎನ್ನುವುದು ನಿಜ. ನಿಆರ್-5 ರಲ್ಲಿ ನಮೂದು ಮಾಡಿದ ವಿಚಾರಣೆಯನ್ನು ನಡೆಸಲು ಮಾತ್ರ ನನ್ನನ್ನು ನೇಮಕ ಮಾಡಲಾಗಿತ್ತು ಎನ್ನುವುದು ನಿಜ.

10. ಆಪಾದಿತ ನೌಕರನ ವಿರುದ್ಧದ ವಿಚಾರಣೆಯನ್ನು ಪ್ರತ್ಯೇಕವಾಗಿ ನಡೆಸಬೇಕಾಗುತ್ತದೆ ಎನ್ನುವುದು ನಿಜ. 3 ಜನ ಆಪಾದಿತರ ವಿರುದ್ಧ ಏಕಕಾಲಕ್ಕೆ ವಿಚಾರಣೆ ನಡೆಸಿದ್ದೇನೆ ಎಂದರೆ ಆದೇಶದ ಪ್ರಕಾರ ಮಾಡಲಾಗಿದೆ. 3 ಜನರ ವಿರುದ್ಧ ವಿಚಾರಣೆ ನಡೆಸಲು ನನಗೆ ಆದೇಶ ಇರಲಿಲ್ಲ ಎನ್ನುವುದು ಸುಳ್ಳು. ಆಪಾದನೆ ರುಜುವಾತುಪಡಿಸುವ ದಾಖಲೆ ಮತ್ತು ಸಾಕ್ಷಿದಾರರ ಪಟ್ಟಿಯನ್ನು ಕೊಡಲಾಗಿತ್ತು. ವಿಚಾರಿಸಲಾದ ಸಾಕ್ಷಿದಾರರ ಸಂಖ್ಯೆ ಮತ್ತು ಗುರುತಿಸಲಾದ ದಾಖಲೆಗಳ ಸಂಖ್ಯೆಯನ್ನು ವರದಿಯಲ್ಲಿ ನಮೂದು ಮಾಡಿದ್ದೇನೆ. ಸಾಕ್ಷಿಯನ್ನು ನೇಮಕಾತಿ ಪ್ರಾಧಿಕಾರದ ಸಾಕ್ಷಿಯನ್ನು ಮಂಡನಾಧಿಕಾರಿ ವಿಚಾರಿಸಬೇಕು ಎನ್ನುವುದು ನಿಜ. ದಿನಾಂಕ:28/02/2019 ರಂದು ಮಂಡನಾಧಿಕಾರಿ ನನ್ನ ಮುಂದೆ ಹಾಜರಾಗಿಲ್ಲ ಎನ್ನುವುದು ಸುಳ್ಳು. ಮಂಡನಾಧಿಕಾರಿ ಸಹಿ ಮತ್ತು ಹಾಜರಾತಿ ಕುರಿತು ನಮೂದು ಇಲ್ಲ ಎನ್ನುವುದು ನಿಜ. ವರದಿಗಾರರ ಹೇಳಿಕೆ ನಂತರ ಪಾಟೀ ಸವಾಲು ಆಗಿಲ್ಲ ಎನ್ನುವುದು ನಿಜ. ಆಪಾದಿತರು ಸಂರಕ್ಷಣಾ ಹೇಳಿಕೆ ನೀಡಬೇಕಾಗುತ್ತದೆ ಎನ್ನುವುದು ನಿಜ. ಕೋವಿಡ್-19 ಅವಧಿ ಇದ್ದಾಗ್ಯೂ ಪಾಟೀ ಸವಾಲು ಮಾಡಲು ಮತ್ತು ಸಂರಕ್ಷಣಾ ಹೇಳಿಕೆ ನೀಡಲು ಆಪಾದಿತರಿಗೆ ನಾನು ಸರಿಯಾದ ಅವಕಾಶ ಕೊಟ್ಟಿಲ್ಲ ಎನ್ನುವುದು ಸುಳ್ಳು.

11. ಸಂರಕ್ಷಣಾ ಹೇಳಿಕೆ ನಂತರ ಆಪಾದಿತರ ಸಾಕ್ಷಿ ವಿಚಾರಣೆಗೆ ಅವಕಾಶ ನೀಡಬೇಕಾಗುತ್ತದೆ ಎನ್ನುವುದು ಸುಳ್ಳು, ಮುಂಚೆಯೇ ನೀಡಬೇಕಾಗುತ್ತದೆ. ಸಾಕ್ಷಿ ವಿಚಾರಣೆ ಕುರಿತು ಆಪಾದಿತರಿಗೆ ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು. ಅವಕಾಶ ನೀಡಿದ ಬಗ್ಗೆ ನಮೂದು ಮಾಡಿಲ್ಲ ಎನ್ನುವುದು ಸುಳ್ಳು. ದಿನಾಂಕ:17/07/2019 ರಂದು ನಾನು ವರದಿಗಾರರ ಸಾಕ್ಷಿ ವಿಚಾರಣೆ ನಡೆಸಿಲ್ಲ

ಎನ್ನುವುದು ಸುಳ್ಳು. ಎಂಎಂ-12 ರಲ್ಲಿ ನಮೂದಿಸಿದ ಕ.ರಾ.ರ.ಸಾ. ಸಂಸ್ಥೆಯ 1970 ನೌಕರರ ಶಿಸ್ತು ಮತ್ತು ನಡತೆ ನಿಯಮಾವಳಿ ಇಲ್ಲ ಎನ್ನುವುದು ಸುಳ್ಳು. ಕ.ರಾ.ರ.ಸಾ. ಸಂಸ್ಥೆಯ ನೌಕರರ ಶಿಸ್ತು ಮತ್ತು ನಡತೆ ನಿಯಮಾವಳಿ 1971 ಇದೆ ಎನ್ನುವುದು ನಿಜ.

12. ಆಪಾದಿತ ಉಲ್ಲಂಘಿಸಿದ ನಡತೆಯ ನಿಯಮ ನಾನು ವರದಿಯಲ್ಲಿ ನಮೂದಿಸಿಲ್ಲ ಎನ್ನುವುದು ಸುಳ್ಳು. ಕ.ರಾ.ರ.ಸಾ. ಸಂಸ್ಥೆಯ ನೌಕರರ ಶಿಸ್ತು ಮತ್ತು ನಡತೆ ನಿಯಮಾವಳಿ 1971 ರ ಭಾಗ-3, 21 ಉಪಖಂಡಿಕೆ 2 ಎ ನಡತೆಗೆ ಸಂಬಂಧಿಸಿದ್ದಲ್ಲ ಎನ್ನುವುದು ಸುಳ್ಳು. ನಾನು ನಿಯಮ ಗಳನ್ನು ನೋಡದೇ ಸರಿಯಾದ ವಿಚಾರಣೆ ನಡೆಸಿಲ್ಲ ಎನ್ನುವುದು ಸುಳ್ಳು. ದಿನಾಂಕಃ16/3/2020 ರಂದು ಆಪಾದಿತ ನನಗೆ ಒಂದು ಮನವಿ ಕೊಟ್ಟು ವಿಚಾರಣೆ ನಿಲ್ಲಿಸಲು ಕೇಳಿಕೊಂಡಿದ್ದ ಎಂದರೆ ಇರಬಹುದು. ದಿನಾಂಕಃ18/03/2020 ರಂದು ಆಪಾದಿತ ನನ್ನ ಮೇಲಾಧಿಕಾರಿಗೆ ಒಂದು ಮನವಿ ಕೊಟ್ಟು ನನ್ನ ವಿರುದ್ಧ ಆಪಾದನೆ ಮಾಡಿದ ಎನ್ನುವುದು ಗೊತ್ತಿಲ್ಲ. ಸದರಿ ವಿಷಯ ನನ್ನ ಗಮನಕ್ಕೆ ತರಲಾಗಿತ್ತು ಎನ್ನುವುದು ಸುಳ್ಳು.

13. ನಾನು ಪಾರದರ್ಶಕ ವಿಚಾರಣೆ ನಡೆಸಿಲ್ಲ, ಕಾನೂನಿನ ನಿಯಮಗಳನ್ನು ಪಾಲಿಸಿಲ್ಲ ಮತ್ತು ನೈಸರ್ಗಿಕ ನ್ಯಾಯತತ್ವ ಪಾಲನೆ ಮಾಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ತನ್ನ ಸಹೋದ್ಯೋಗಿಯ ಸಹಾಯ ಪಡೆದು ಅರ್ಜಿ ಸಲ್ಲಿಸಿದಾಗ ನಾನು ಅನುಮತಿ ನೀಡಿಲ್ಲ ಎನ್ನುವುದು ಸುಳ್ಳು. ಸಾಕ್ಷಿದಾರರಿಗೆ ಪಾಟೀ ಸವಾಲು ಮಾಡಲು ಅರ್ಜಿದಾರರಿಗೆ ಅವಶ್ಯಕ ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರರ ಸಾಕ್ಷಿ ವಿಚಾರಣೆ ಮಾಡಲು ನಾನು ಅವಕಾಶ ಕೊಟ್ಟಿಲ್ಲ ಎನ್ನುವುದು ಸುಳ್ಳು. ಅರ್ಜಿದಾರರ ಸಾಕ್ಷಿ ವಿಚಾರಣೆಗೆ ನಾನು ದಿನಾಂಕ ನಿಗದಿಪಡಿಸಿಲ್ಲ ಎನ್ನುವುದು ಸುಳ್ಳು. ದಿನಾಂಕ ನಿಗದಿಪಡಿಸಿರುವ ಕುರಿತು ನಾನು ಆರ್ಡರಶೀಟನಲ್ಲಿ ನಮೂದು ಮಾಡಿದ್ದೇನೆ. ಆ ರೀತಿ ನಾನು ನಮೂದು ಮಾಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ತನ್ನ ಸಂರಕ್ಷಣೆ ಹೇಳಿಕೆ ಸಲ್ಲಿಸಲು ನಾನು ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು.

14. ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ದೋಷಾರೋಪಣೆ ಸಾಬೀತಾಗಿದೆಯೆಂದು ವರದಿ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು. ಅರ್ಜಿದಾರ ಬೇರೆ ವಿಚಾರಣಾಧಿಕಾರಿಯನ್ನು ನೇಮಿಸುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆದುದರಿಂದ ಪಕ್ಷಪಾತತನ ತೋರಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

***(*** ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು. ***)***

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.